ಉ) ಆದನ್ನು ಕೆ.ಎಸ್.ಸಿ.ಸಿ.ಯವರೆ ಮಾಡುತ್ತಿದ್ದಾರೆಯೇ? ಅಥವಾ ಬೇರೆಯವರು ಮಾಡುತ್ತಿದ್ದಾರೆಯೇ?

ಊ) ಕೆ.ಎಸ್.ಸಿ.ಗೆ ಮೇಲ್ಕಂಡ ಕೆಲಸಗಳನ್ನು ಮಾಡಲು ಸಾಮರ್ಥ್ಯ ಇದೆಯೇ?

ಶ್ರೀ ಕೆ.ಎಸ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಒಟ್ಟು ಆರು ಕಡೆ ಕಂಟ್ರೋಲ್ ಬ್ಲಾಸ್ಟಿಂಗ್ ಮಾಡಲಾಗಿರುತ್ತದೆ. ಇದರ ವಿವರಗಳು ಮತ್ತು ಕಂಟ್ರೋಲ್ ಬ್ಲಾಸ್ಟಿಂಗ್ ಮಾಡುವ ಮುನ್ನ ಅಂದಾಜು ಮಾಡಲಾದ ಕಾಮಗಾರಿಯ ಮೊತ್ತ ಈ ಕೆಳಕಂಡಂತಿರುತ್ತವೆ.

1)	ವಿತರಣಾ ನಾಲೆ 7ರ ಕಿಮೀ 12	4.20 ಲಕ್ಷಗಳು
2)	ಟಿ.ಬಿ. ನಾಲೆ 7ರ ಕಿಮೀ 32	68.10 ಲಕ್ಷಗಳು
3)	ತುಮಕೂರು ಶಾಖಾ ನಾಲೆ ಕಿಮೀ 130	99.00 ಲಕ್ಷಗಳು
4)	ವಿತರಣಾ ನಾಲೆ 2ರ ಕಿಮೀ 20ರಲ್ಲಿ	2.95 ಲಕ್ಷಗಳು
5)	ತುಮಕೂರು ಶಾಖಾ ನಾಲೆ ಕಿಮೀ 57	64.80 ಲಕ್ಷಗಳು
6)	ತುಮಕೂರು ಶಾಖಾ ನಾಲೆ ಕಿಮೀ 137ರಲ್ಲಿ	97.00 ಲಕ್ಷಗಳು

ಆ) ನಾಲಾ ಪಂಕ್ತೀಕರಣವು ಹಳ್ಳಿಗಳ ಪಕ್ಕದಲ್ಲಿ ಮತ್ತು ಕೆಲವೆಡೆ ಹೈಟೆನ್‌ಷನ್ ವಿದ್ಯುತ್ ಲೈನ್ ಹಾದು ಹೋಗಿದ್ದು ನಾಲಾ ಅಗೆತದ ಸಮಯದಲ್ಲಿ ಗಟ್ಟಿ ಗ್ರಾನೈಟ್ ಕಲ್ಲುಬಂಡೆಗಳು, ಬಂದಿದ್ದು ಅವುಗಳನ್ನು ತೆಗೆಯಲು ಡೈ-ನಾಮೆಂಟ್ ಉಪಯೋಗಿಸಿದಲ್ಲಿ ಹಳ್ಳಿಗಳ ಕಡೆಗೆ ಚಿಮ್ಮಿ ಜನ ಜಾನುವಾರು ಹಾಗೂ ಆಸ್ತಿಗಳಿಗೆ ದಕ್ಕೆಉಂಟಾಗುವ ಸಂಭವವಿದ್ದು, ಹಾಗೂ ವಿದ್ಯುತ ಲೈನಿಗೆ ಹಾನಿಯಾಗುವ ಸಂಬವದ ಹಿನ್ನೆಲೆಯಲ್ಲಿ ಕಂಟ್ರೋಲ್‌ಬ್ಲಾಸ್ಟಿಂಗ್ ಅನ್ನು ಅಳವಡಿಸಿ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಈ) ರೂ, 28.00 ಕೋಟಿ ಮೊತ್ತದಷ್ಟು ಕಿಮೀ 175 ನೇ ವರೆಗಿನ ಮಣ್ಣಿನ ಅಗೆತ ಹಾಗೂ ಅಡ್ಡಮೋರಿ ಕಾಮಗಾರಿಗಳನ್ನು ಕೆ.ಎಸ್.ಸಿ.ಸಿ.ಗೆ ನೀಡಲಾಗಿದೆ.

ಉ) ನೀರಾವರಿ ಇಲಾಖೆಯು ಕೆ.ಎಸ್.ಸಿ.ಸಿ.ಗೆ ಕಾಮಗಾರಿಗಳನ್ನು ವಹಿಸಿಕೊಡಲಾಗಿದೆ.

ಊ) ವಹಿಸಿದ ಕಾಮಗಾರಿಗಳನ್ನು ಕೆ.ಎಸ್.ಸಿ.ಸಿ. ಸಂಸ್ಥೆಯು ತೃಪ್ತಿಕರವಾಗಿ ನಿರ್ವಹಿಸಿರುತ್ತವೆ.

ಅಬಕಾರಿ ಹರಾಜು ಕುರಿತು

2118 -ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅಬಕಾರಿ ಹರಾಜನ್ನು ಪ್ರಸ್ತುತ ಮೂರು ಅಥವಾ ಆರು ತಿಂಗಳಿಗೊಮ್ಮೆ ನಡೆಸುವ ಅಥವಾ ಮುಂದುವರಿಸುವ ಸರ್ಕಾರಿ ಕ್ರಮದ ಔಚಿತ್ಯವೇನು? ಯಾವ ಕಾರಣಕ್ಕಾಗಿ ಈ ರೀತಿ ಮಾಡಲಾಗುತ್ತಿದೆ?

2) ಅನಧಿಕೃತ ಶರಾಬು ಅಂಗಡಿಗಳ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

3) "ಮಾಡುವವನೇ ಮಾರುವವ" ಎಂಬ ಧೋರಣೆಗೆ (ಶೇಂದಿ ತಯಾರಕನೇ ಮಾರಾಟಗಾರ) ಸರ್ಕಾರದ ನಿಲುವೇನು?

4) ಶೇಂದಿ ಮಾರಾಟ ವ್ಯವಸ್ಥೆಯಲ್ಲಿ ಈ ಬದಲಾವಣೆಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ (ಮುಖ್ಯಮಂತ್ರಿಗಳು) :

1) 1997-98ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾಡಿರುವ ಘೋಷಣೆಯ ಪ್ರಕಾರ ಸಾರಾಯಿ ಮಾರಾಟದ ಹಕ್ಕನ್ನು ಹರಾಜು ವ್ಯವಸ್ಥೆಗೆ ಬದಲಾಗಿ ಪರವಾನಗಿ ಮೂಲಕ ನೀಡಲಾಗುವುದು. ಈ ಹೊಸ ವ್ಯವಸ್ಥೆಯನ್ನು ಹೇಗೆ ಜಾರಿಗೆ ತರಬೇಕೆಂಬ ವಿವರಗಳನ್ನು ಸಚಿವ ಸಂಪುಟದ ಉಪ ಸಮಿತಿ ಪರಿಶೀಲಿಸುತ್ತಿದೆ. ಹೊಸ ವ್ಯವಸ್ಥೆ ಜಾರಿಗೆ ಬರುವುದನ್ನು ಕಾಯ್ದಿರಿಸಿ ದಿನಾಂಕ 1-8-97 ರಿಂದ 31-10-97ರ ವರೆಗೆ 3 ತಿಂಗಳಿಗೆ ಅಬಕಾರಿ ಹರಾಜನ್ನು ಮಾಡಿಲಾಗಿದೆ.

2) ಅಂತಹ ಅಂಗಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

3) ಮೂರ್ತೆದಾರ ಶೇಂದಿಗೆ ಒಳ್ಳೆಯ ಬೆಲೆ ಕೊಡಿಸುವ ಹಿತದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿಯನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಲು ಅನುಮತಿ ನೀಡಾಲಾಗಿದೆ. ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಸಾರಾಯಿ ಜೊತೆಗೆ ಶೇಂದಿ ಗುತ್ತಿಗೆಯನ್ನು ಹರಾಜು ಮೂಲಕ ಮಾರಾಟ ಮಾಡಲಾಗಿದೆ.

4) ಉದ್ಭವಿಸುವುದಿಲ್ಲ

ಕಾನೂನು ಮತ್ತು ಸುವ್ಯವಸ್ಥೆ ಪಾಲನೆ

2119 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ನಿಗಧಿ ಪಡಿಸಿರುವ ಜನಸಂಖ್ಯೆಗನುಗುಣವಾಗಿ ಪೋಲೀಸ್ ಸಿಬ್ಬಂದಿಯ ಪ್ರಮಾಣವೇನು?

ಆ) ಈ ಪ್ರಮಾಣವನ್ನು ಯಾವಾಗ ನಿಗಧಿಪಡಿಸಲಾಗಿದೆ?